ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 568 |
| 2 | ಸದಸ್ಯರ ಹೆಸರು | : ಶ್ರೀ ಎನ್.ಎಸ್.ಭೋಸ್‌ರಾಜು, (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | : 13.12.2018 |
| 4 | ಉತ್ತರಿಸುವ ಸಚಿವರು | : ಮಾನ್ಯ ಮುಖ್ಯ ಮಂತ್ರಿಗಳು. |

| ಕ್ರಸ | ಪ್ರಶ್ನೆಗಳು | ಉತ್ತರ |
|---|---|---|
| 1 | ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ 2017-18 ರಿಂದ 2018-19 ನೇ ಸಾಲಿನವರೆಗೂ ಆರು ಜಿಲ್ಲೆಗಳಿಗೆ ಮಂಜೂರಾಗಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; ಮಂಜೂರಾಗಿರುವ ಕಾಮಗಾರಿಗಳಿಗೆ ಬಿಡುಗಡೆ ಆಗಿರುವ ಅನುದಾನ ಎಷ್ಟು; | ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ 2017-18 ರಿಂದ 2018-19 ನೇ ಸಾಲಿನವರೆಗೂ ಆರು ಜಿಲ್ಲೆಗಳಿಗೆ ಮಂಜೂರಾಗಿರುವ ಕಾಮಗಾರಿಗಳ ಸಂಖ್ಯೆ ಹಾಗೂ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ. (see table below) |
| 2 | ಹೈದ್ರಾಬಾದ-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿವತಿಯಿಂದ ಜಾರಿಗೊಳಿಸಿರುವ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಯ ಸ್ಥಾಪನೆಯಾದ ಪ್ರಾರಂಭದ ವರ್ಷಗಳಲ್ಲಿ (2013-14, 2014-15 ನೇ ಸಾಲಿನಲ್ಲಿ) ಹಲವಾರು ತಾಂತ್ರಿಕ ಹಾಗೂ ಆಡಳಿತಾತ್ಮಕ ಕಾರಣಗಳಾದ ವರ್ಷಾಂತ್ಯದಲ್ಲಿ ಹಣ ಬಿಡುಗಡೆ, ಚುನಾವಣಾ ನೀತಿ ಸಂಹಿತೆ ಜಾರಿ, ಮಂಡಳಿಯಲ್ಲಿ ಹಾಗೂ ಅನುಷ್ಠಾನ ಇಲಾಖೆಗಳಲ್ಲಿ ಅಧಿಕಾರಿ ಹಾಗೂ ಸಿಬ್ಬಂಧಿ ಕೊರತೆ, ಸ್ಥಳದ ಸಮಸ್ಯೆ, ಕಾಮಗಾರಿಗಳ ಬದಲಾವಣೆ ಮುಂತಾದ ಕಾರಣಗಳಿಂದ ಕಾಮಗಾರಿಗಳ ಅನುಷ್ಠಾನವು ಸ್ವಲ್ಪಮಟ್ಟಿನ ಹಿನ್ನಡೆಯಾಗಿರುತ್ತದೆ. ತದ ನಂತರದ ವರ್ಷಗಳಲ್ಲಿ ಕಾಮಗಾರಿಗಳ ಅನುಷ್ಠಾನವನ್ನು ತೀವ್ರಗೊಳಿಸಿದ್ದು, ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳವರ ಅಧ್ಯಕ್ಷತೆಯಲ್ಲಿ ಹಲವಾರು ಸಭೆಗಳನ್ನು ನಡೆಸಿದ್ದು, ಮಾಹೆವಾರು ಗುರಿಗಳನ್ನು ನಿಗಧಿಪಡಿಸಿಕೊಂಡು ಅನುಷ್ಠಾನಿಸುವಂತೆ ಅನುಷ್ಠಾನಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಇದಲ್ಲದೆ ಮಂಡಳಿಯ ಕಾರ್ಯದರ್ಶಿಯವರು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಅನುಷ್ಠಾನ ಇಲಾಖಾ ಅಧಿಕಾರಿಗಳೊಂದಿಗೆ ಹಲವಾರು ಸಭೆಗಳನ್ನು ಕೈಗೊಂಡಿದ್ದು, ಕಾಲಮಿತಿಯೊಳಗೆ ಮಂಡಳಿಯಿಂದ ಅನುಮೋದಿತ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಲ್ಲಾ ಅನುಷ್ಠಾನ ಇಲಾಖಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿರುತ್ತದೆ. |

| ವರ್ಷ | ಮಂಜೂರಾದ ಕಾಮಗಾರಿಗಳು (ಸಂಖ್ಯೆ) | ಬಿಡುಗಡೆಯಾದ ಅನುದಾನ (ರೂ.ಕೋಟಿಗಳಲ್ಲಿ) |
|---|---|---|
| **2017-18** | 4585 | 355.29* |
| **2018-19** | 4393 | 750.00 |

*ರೂ.5.75 ಕೋಟಿ ಆಡಳಿತಾತ್ಮಕ ಅನುದಾನ ಸೇರಿದೆ.

ಸಂಖ್ಯೆ: ಯೋಇ 105 ಹೈಕವಿ 2018

(ಹೆಚ್.ಡಿ. ಕುಮಾರ ಸ್ವಾಮಿ)
ಮುಖ್ಯ ಮಂತ್ರಿ